
ಜನರಿಗೆ ತಲುಪಿಸಲು ನಾವು ಹೆಣಗಾಡುತ್ತೇವೆ. ಓದಿದವರು ನೀಡುವ ಮೌಲ್ಯಯುತ ಪ್ರತಿಕ್ರಿಯೆಗಳೇ ನಮಗೆ ಮುಂದಿನ ಸಂಚಿಕೆ ರೂಪಿಸಲು ಸ್ಫೂರ್ತಿ. ಮುಂದಿನ ವರ್ಷ ನಾವು 'ಅಟೆಂಡೆನ್ಸ್' ಪತ್ರಿಕೆಯ ಬೆಳ್ಳಿಹಬ್ಬವನ್ನು ಆಚರಿಸಲಿದ್ದೇವೆ. ಕಾರ್ಪೊರೇಟ್ ದೇಣಿಗೆದಾರರು, ಸರ್ಕಾರಿ ನೆರವು, ಖಾಸಗಿ ನೆರವುಗಳಿಲ್ಲದೆ ಓದುಗರ ನೆರವಿನೊಂದಿಗೆ ಈ ಪತ್ರಿಕೆ ನಡೆಯುತ್ತಿದೆ. ವಿಶ್ವವಿದ್ಯಾಲಯಗಳಲ್ಲಿ, ವಿದೇಶಗಳಲ್ಲಿ, ನೃತ್ಯ ಸಂಸ್ಥೆಗಳಲ್ಲಿ ಈ ಪತ್ರಿಕೆಯನ್ನು ಓದುವವರಿದ್ದಾರೆ ಎನ್ನುವುದು ನಮ್ಮ ಖುಷಿ. ಸಾಮಾಜಿಕ ಜಾಲತಾಣಗಳ ಭರಾಟೆಯ ನಡುವೆ ಈ ಪತ್ರಿಕೆಯು ಹೀಗೆ ಗೌರವಪೂರ್ವಕವಾಗಿ ನಿಂತಿರುವುದೇ ನಮಗೆ ಹೆಮ್ಮೆಯ ವಿಷಯ.

◆ **ನೀವು ಬರೋಡಾದಲ್ಲಿ ಹುಟ್ಟಿ ಬೆಳೆದವರು. ಬಾಲ್ಯದ ನೆನಪುಗಳನ್ನು ಹಂಚಿಕೊಳ್ಳುವಿರಾ?**

ಬರೋಡಾ ಮೈಸೂರಿನಂತೆ. ಅದು ರಾಜರ ನಗರ. ಸಣ್ಣ ನಗರವಾದರೂ ಸುಂದರವಾದುದು. ಸ್ವತಂತ್ರ ಭಾರತದಲ್ಲಿ ಕಲೆಗಾಗಿ ಪ್ರತ್ಯೇಕ ವಿಶ್ವವಿದ್ಯಾಲಯವೊಂದು ಮೊತ್ತ ಮೊದಲ ಬಾರಿಗೆ ಬರೋಡಾದಲ್ಲಿ ಆರಂಭವಾಯಿತು. ನನ್ನ ಗೌರವಾನ್ವಿತ ತಂದೆ ಪ್ರೊ. ಮೋಹನ್ ಖೋಕರ್ (1924–1999) ಅವರು ಈ ವಿಶ್ವವಿದ್ಯಾಲಯದ ಸಂಸ್ಥಾಪಕ ಮುಖ್ಯಸ್ಥರು. ಅವರು ಇದನ್ನು ಆರಂಭಿಸುವಾಗ ಅವರಿಗೆ ಕೇವಲ 24 ವರ್ಷ ವಯಸ್ಸು. ಅಂದಿನ ಮಹಾರಾಜರ ಸಮಿತಿಯು ಅವರನ್ನು ಆಯ್ಕೆ ಮಾಡಿ ನೃತ್ಯ ಸಂಗೀತ ಕಾಲೇಜಿನ ಮುಖ್ಯಸ್ಥರನ್ನಾಗಿ ನೇಮಿಸಿದ್ದರು. ಬಿ.ಎ. ಕೋರ್ಸನ್ನು ರೂಪಿಸುವಂತೆ ಸೂಚಿಸಿದ್ದರು. 1949ರಲ್ಲಿ, ಅಂದರೆ ಇಂದಿಗೆ 75 ವರ್ಷಗಳ ಹಿಂದೆ ಅವರು ಈ ಕೆಲಸ ನಿರ್ವಹಿಸಿದ್ದರು ಎನ್ನುವುದೇ ನನಗೆ ಇಂದಿಗೂ ಸೋಜಿಗ. ಇಂದು ಅದೇ ಕೋರ್ಸಿಗೆ ಹಲವಾರು ವಿದ್ಯಾರ್ಥಿಗಳು ಸೇರಿಕೊಂಡು ಓದುತ್ತಿದ್ದಾರೆ. ಅಷ್ಟೇ ಅಲ್ಲ, ಕಲೆಗೆ ಸಂಬಂಧಿಸಿದ ಇನ್ನೂ ಅನೇಕ ಕೋರ್ಸುಗಳು, ಈ ವಿಶ್ವವಿದ್ಯಾಲಯದಲ್ಲಿಯೂ, ದೇಶದ ಇತರ ವಿಶ್ವವಿದ್ಯಾಲಯಗಳಲ್ಲಿಯೂ ಕಾರ್ಯನಿರ್ವಹಿಸುತ್ತಿವೆ.

ನಾನು ಬಾಲ್ಯವನ್ನು ಬಹಳ ಖುಷಿಯಾಗಿ ಕಳೆದೆ. ಫೆಬ್ರುವರಿ 29ರಂದು ಹುಟ್ಟಿದ್ದರಿಂದ ನನ್ನ ಹುಟ್ಟುಹಬ್ಬ ನಾಲ್ಕು ವರ್ಷಗಳಿಗೊಮ್ಮೆ ಬರುತ್ತಿತ್ತು. ರುಕ್ಮಿಣಿ ದೇವಿ ಅರುಂಡೇಲು ಅವರೂ ಇದೇ ದಿನಾಂಕದಂದು ಹುಟ್ಟಿದ್ದರು ಎಂದು ಅಪ್ಪ ಹೇಳುತ್ತಿದ್ದರು. ಅವರು ನನ್ನ ತಂದೆಯವರ ಮೊದಲ ಗುರುಗಳು. ಚೆನ್ನೈಯಲ್ಲಿರುವ ಕಲಾಕ್ಷೇತ್ರಕ್ಕೆ ಉತ್ತರ ಭಾರತದಿಂದ ಬಂದು ಸೇರಿದ ಮೊದಲ ವಿದ್ಯಾರ್ಥಿ ನನ್ನ ತಂದೆ ಮೋಹನ್ ಖೋಕರ್.



ನಾನು ಅನೇಕ ಕಲಾದಿಗ್ಗಜರ ಮಡಿಲಿನಲ್ಲಿಯೇ ಬೆಳೆದೆ ಎನ್ನುವುದು ಸಂತೋಷದ ವಿಷಯ. ಬರೋಡ ಎಂದರೆ ಕೇವಲ ನೃತ್ಯವಷ್ಟೇ ಅಲ್ಲ. ಚಿತ್ರಕಲೆಗೂ ಈ ನಗರ ಪ್ರಸಿದ್ಧವಾದುದು. ನಾನು ಸಹಜವಾಗಿಯೇ ನೃತ್ಯ ಕಲಿತೆ. ಭಾರತೀಯ ಸಂಗೀತ, ವಿದೇಶೀ ಸಂಗೀತ, ಸಿನಿಮಾ ಸಂಗೀತ, ಭಜನೆ ಯಾವ ತಾಳ ಲಯಕ್ಕಾದರೂ ನಾನು ನೃತ್ಯ ಮಾಡುತ್ತಿದ್ದೆ. ನನ್ನ ಅಮ್ಮ ಪ್ರಸಿದ್ಧ ಭರತನಾಟ್ಯ ನೃತ್ಯಕಲಾವಿದೆ ಗುರು ಎಂ.ಕೆ. ಸರೋಜಾ ಅವರು ನೃತ್ಯ ಮಾಡುತ್ತಿರುವುದನ್ನು ನೋಡುತ್ತಲೇ ನಾನು